ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ನ್ಯಾಯಾಲಯ

ಸಿದ್ದಾಪುರ

ಸಿ.ಸಿ.  107/2024

| | |
|---|---|
| ಸಿ.ಡಬ್ಲ್ಯೂ: | 10 |
| ಪಿ.ಡಬ್ಲ್ಯೂ: | 8 |

| | | |
|---|---|---|
| **ಸಾಕ್ಷಿದಾರರ ಹೆಸರು** | : | ಡಾ:ಶ್ರೇಯಸ್ ಪಂಡಿತ್ |
| ತಂದೆ ಹೆಸರು | : | ವಿನೋದ ಪಂಡಿತ್ |
| ವಯಸ್ಸು | : | 26 ವರ್ಷ |
| ವೃತ್ತಿ | : | ವಿದ್ಯಾರ್ಥಿ |
| ವಾಸ | : | ವಿಜಯಪುರ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 13-08-2026**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನಾನು ಜೂನ್ -2023 ರಿಂದ ಫೆಬ್ರವರಿ -2026 ವರೆಗೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿ: 29-02-2024 ರಂದು ರಾತ್ರಿ 11-00 ಗಂಟೆಯ ಸಮಯದಲ್ಲಿ 50 ವರ್ಷಯ ವಯಸ್ಸಿನ ಮೋಹನ ಸೊಮಣ್ಣ ನಾಯರ್ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಪರಿಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

ಹಣೆಯ ಎಡಭಾಗದ ಸ್ವಲ್ಪ ಮೇಲೆ 4cm x 1cm x 1 cm ಉದ್ದ ಹಾಗೂ ಅಗಲದ ಹಾಗೂ ಆಳವಾದ ಗಾಯ ಕಂಡುಬಂದಿರುತ್ತದೆ.

ನಂತರ ಅವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿರುತ್ತೇನೆ.

ಈ ಬಗ್ಗೆ ದಿಃ 14-03-2024 ರಂದು ನಾನು ಚಾಸಾ-1 ರವರ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ ಗಾಯಪ್ರಮಾಣದ ಪತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ನಿ.ಪಿ -13 ಎಂದು ಗುರುತಿಸಲಾಯಿತು.

ಈ ಮೇಲ್ಕಂಡ ಗಾಯವು ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಈ ಮೇಲ್ಕಂಡ ಗಾಯವು ಒಬ್ಬ ವ್ಯಕ್ತಿಯು ಮೊತ್ತೊಬ್ಬ ವ್ಯಕ್ತಿಗೆ ದೊಣ್ಣೆಯಿಂದ ಹೊಡೆದಾಗ ನನ್ನ ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಗಾಯಗಳು ಆಗುವ ಸಂಭವ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಒಬ್ಬ ವ್ಯಕ್ತಿಯು ಚೂಪಾದ ಹಾಗೂ ಗಟ್ಟಿಯಾದ ಸ್ಥಳದಲ್ಲಿ ಬಿದ್ದಂತಹ ಸಂದರ್ಬದಲ್ಲಿ ನನ್ನ ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವುವಂತಹ ಗಾಯಗಳು ಆಗುವ ಸಂಬವ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ.**

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಒ**

ಸಹಿ ಇದೆ/-

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**

**ಸಿದ್ದಾಪುರ**